ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 8 ಸಾವಿಯೋ 2010

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 11.07.2011.

## ಸುತ್ತೋಲೆ

ವಿಷಯ: ಕರ್ನಾಟಕ ರಾಜ್ಯ ನೌಕರರ ಸಾಮೂಹಿಕ ವಿಮಾ ಯೋಜನೆಗೆ ಸಂಬಂಧಿಸಿದಂತೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರು ನಿವೃತ್ತರಾಗುವ/ಮರಣ ಹೊಂದಿರುವ ಮಾಹಿತಿಯನ್ನು ನೀಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂ. ಎಫ್‌ಡಿ 8 ಸಾವಿಯೋ 2010, ದಿ: 10.03.2011.

**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ದಿ: 10.03.2011ರ ಅಧಿಸೂಚನೆಯಲ್ಲಿ ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಇವರನ್ನು ಕರ್ನಾಟಕ ರಾಜ್ಯ ನೌಕರರ ಸಾಮೂಹಿಕ ವಿಮಾ ಯೋಜನೆಯ ಆಡಳಿತಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಆದುದರಿಂದ ಇನ್ನು ಮುಂದೆ ತಮ್ಮ ಇಲಾಖೆಯಲ್ಲಿ ಪ್ರತಿ ತಿಂಗಳು ನಿವೃತ್ತರಾಗುವ/ಮರಣ ಹೊಂದಿರುವ ಸಿಬ್ಬಂದಿಗಳ ಕ್ರೋಢೀಕೃತ ವಿವರಗಳನ್ನು ಅದರ ಮುಂದಿನ ತಿಂಗಳ 10ನೇ ತಾರೀಖಿನೊಳಗೆ ಕೆಳಕಂಡ ನಮೂನೆಯಲ್ಲಿ ಆಡಳಿತಾಧಿಕಾರಿಗಳು, ಸಾಮೂಹಿಕ ವಿಮಾ ಯೋಜನೆ ಮತ್ತು ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಡಾ: ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001, ಇವರಿಗೆ ನೇರವಾಗಿ ಕಳುಹಿಸಿಕೊಡುವಂತೆ ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೂ ಸೂಚನೆಗಳನ್ನು ನೀಡಲಾಗಿದೆ.

### ನ ಮೂ ನೆ

__________ಮಾಹೆಯಲ್ಲಿ ನಿವೃತ್ತರಾದವರ/ಮರಣ ಹೊಂದಿರುವ ಅಧಿಕಾರಿ/ನೌಕರರ ವಿವರ

| ವಿವರಗಳು | ವೃಂದ | | | | ಒಟ್ಟು |
|---|---|---|---|---|---|
| | ಎ | ಬಿ | ಸಿ | ಡಿ | |
| ವಯೋನಿವೃತ್ತಿ ಹೊಂದಿರುವ ನೌಕರರ ಸಂಖ್ಯೆ | | | | | |
| ಸೇವೆಯಲ್ಲಿರುವಾಗಲೇ ಮರಣ ಹೊಂದಿರುವ ನೌಕರರ ಸಂಖ್ಯೆ | | | | | |

ಅಲ್ಲದೇ, ಸಾಮೂಹಿಕ ವಿಮಾ ಯೋಜನೆಯ ಕಂತುಗಳ ಸ್ವೀಕೃತಿ ಮತ್ತು ಪಾವತಿಗಳನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆಗೆ ಜಮೆ ಮಾಡುವಂತೆ ತಿಳಿಸಲಾಗಿದೆ.

1. ವಿಮಾ ನಿಧಿ 8011-00-107-0-01 (ಪಾವತಿ & ಸ್ವೀಕೃತಿ ಎರಡಕ್ಕೂ ಒಂದೇ)
2. ಉಳಿತಾಯ ನಿಧಿ. 8011-00-107-0-02 (ಪಾವತಿ & ಸ್ವೀಕೃತಿ ಎರಡಕ್ಕೂ ಒಂದೇ)

(ಎಂ.ಎಸ್. ಶಿವರಾಮ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ & ಮುಂಗಡಗಳು)

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು - ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿಯನ್ನು:

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು
2. ಎಲ್ಲಾ ಇಲಾಖಾ ಮುಖ್ಯಸ್ಥರು,
3. ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಕಾರ್ಯನಿರ್ವಹಣಾಧಿಕಾರಿಗಳು,
4. ಆಡಳಿತಾಧಿಕಾರಿಗಳು, ಸಾಮೂಹಿಕ ವಿಮಾ ಯೋಜನೆ ಮತ್ತು ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಡಾ: ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001,
5. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು,
6. ಕಛೇರಿ ಪ್ರತಿ/ಶಾಖಾರಕ್ಷಕ ಕಡತ/ಹೆಚ್ಚುವರಿ ಪ್ರತಿ.